ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE : 02/08/2019

**ವ್ಯಕ್ತಿ ಚಿತ್ರಣ** ಜಗನ್ನಾಥ ರಾವ್ ಜೋಶಿ, ಅಟಲ್ ಬಿಹಾರಿ ವಾಜಪೇಯಿ, ಅಡ್ವಾನಿ ಅವರಂತಹ ರಾಷ್ಟ್ರಭಕ್ತರಿಂದ ಕಟ್ಟಲ್ಪಟ್ಟ ಈ ರಾಜಕೀಯ ಸಂಸ್ಕೃತಿ ಮೇಳೈಸಿದೆ

# ಬಿಜೆಪಿಯಲ್ಲಿ ನಿಷ್ಠಾವಂತರಿಗೆ ಮಣೆ, ಇದಕ್ಕೆ ಕಾಗೇರಿ ಸಾಕ್ಷಿ

• **ಪ್ರಮೋದ ಹೆಗಡೆ** ರಾಜ್ಯ ಬಿಜೆಪಿ ವಕ್ತಾರರು

ಭಾರತೀಯ ಜನತಾ ಪಕ್ಷ, ಮೂಲದಲ್ಲಿ ಜನ ಸಂಘ ಭಾರತದ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷವಾಗಿ ನಡೆದು ಬಂದ ದಾರಿ ಅದ್ಭುತ ರೋಚಕವಾದ ಕಥೆಯಾಗಿದೆ. ಶ್ಯಾಂ ಪ್ರಸಾದ್ ಮುಖರ್ಜಿ, ದೀನ ದಯಾಳ ಉಪಾಧ್ಯಾಯರವರ ಬಲಿದಾನ, ಜಗನ್ನಾಥ ರಾವ್ ಜೋಶಿ, ಅಟಲ್ ಬಿಹಾರಿ ವಾಜಪೇಯಿ ಹಾಗೂ ಈಗಿರುವ ಲಾಲಕೃಷ್ಣ ಅಡ್ವಾನಿ ಇಂತಹ ಅನೇಕ ರಾಷ್ಟ್ರಭಕ್ತರಿಂದ ಕಟ್ಟಲ್ಪಟ್ಟ ಈ ರಾಜಕೀಯಸಂಸ್ಕೃತಿ,ಆದರ್ಶ,ಪ್ರಾಮಾಣಿಕತೆ, ರಾಷ್ಟ್ರಭಕ್ತಿಯಿಂದ ಮೇಳೈಸಲ್ಪಟ್ಟಿದೆ.

ಇಬ್ಬರ ಪಕ್ಷ ಇಂದು ಲೋಕಸಭೆಯಲ್ಲಿ 303ಕ್ಕೆ ಬಂದಿದೆ. ರಾಷ್ಟ್ರಾದ್ಯಂತ ಬಹುತೇಕ ರಾಜ್ಯವನ್ನು ಆಳುವ ಶಕ್ತಿ ವಿಸ್ತರಿಸಿಕೊಂಡಿದೆ. ಈ ಪಕ್ಷಕ್ಕಾಗಿ ದುಡಿದ ಅಸಂಖ್ಯಾತ ನಾಯಕರು ಎಲೆಮರೆಯ ಕಾಯಿಗಳಾಗಿಇತಿಹಾಸಪ್ರತಿಷ್ಠಾಪಿಸಿದ್ದಾರೆ. ಇಂತಹ ಆದರ್ಶ ಪಕ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಸಭಾಧ್ಯಕ್ಷದಂತಹ ಪರಮೋಚ್ಛ ಸ್ಥಾನಕ್ಕೆ ಏರಿದ ಕೀರ್ತಿ ಇಂದು ವಿಶ್ವೇಶ್ವರ ಹೆಗಡೆ ಕಾಗೇರಿ ಅವರದು.



1994ರ ಪೂರ್ವ ಎಬಿವಿಪಿ ಸಕ್ರೀಯ ಕಾರ್ಯಕರ್ತರಾಗಿ, ಪದಾಧಿಕಾರಿಯಾಗಿ ದುಡಿದ ಕಾಗೇರಿ ಉತ್ತರ ಕನ್ನಡ ಜಿಲ್ಲಾ ಅಂಕೋಲ ಕ್ಷೇತ್ರದಿಂದ ಸ್ಪರ್ಧೆ ಮಾಡಿದರು. ಆಗಷ್ಟೇ ಈದ್ಗಾ ಮೈದಾನದ ಬಿಸಿ ಬಿಸಿ ವಾತಾವರಣವಿತ್ತು. ಹಿಂದುತ್ವದ ಅಲೆ ಪ್ರಬಲವಾಗಿ ಬೀಸಲಾರಂಭಿಸಿತು. ಅದೇ ರಭಸದಲ್ಲಿ ಕಾಗೇರಿಯವರು ಶಾಸಕರಾದರು. 3 ಸಲ ನಿರಂತರವಾಗಿ ಅಂಕೋಲಾ ಕ್ಷೇತ್ರದಲ್ಲಿ ಶಾಸಕರಾಗಿ ಗದ್ದರು. ಅವರಿಗೆ ಅನುಕೂಲವಾದ ಶಿರಸಿ ಕ್ಷೇತ್ರದಲ್ಲಿ 3 ಸಲ ಶಾಸಕರಾಗಿ ಗೆದ್ದಿದ್ದಾರೆ, 2008ರಲ್ಲಿ ರಾಜ್ಯದ ಶಿಕ್ಷಣ ಸಚಿವರಾಗಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿ ದರು. ರಾಜ್ಯದ ಶಿಕ್ಷಣ ಸಚಿವರಾಗಿತನ್ನ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದು ರಾಜ್ಯಾದ್ಯಂತ ಸುದ್ದಿಯಾಗಿತ್ತು. ರಾಜಕಾರಣದಲ್ಲಿ 6 ಸಲ ಗೆದ್ದರೂ ಪ್ರಾರಂಭದ ದಿನದಂತೆ ಇಂದಿಗೂ ಸರಳತೆ, ಸಜ್ಜನಿಕೆಗೆ ಹೆಸರಾಗಿದ್ದಾರೆ.

ಇಷ್ಟೆಲ್ಲ ಅಧಿಕಾರ ಅನುಭವಿಸಿದರೂ ತನ್ನ ಸರಳತೆಯಿಂದ ಬದಲಾಗಲಿಲ್ಲ. ತನ್ನ ಕುಟುಂಬದ ಸದಸ್ಯರೆಲ್ಲ ಇಂದಿಗೂ ಯಾವ ಹಸ್ತಕ್ಷೇಪವನ್ನೂ ಮಾಡುವುದಿಲ್ಲ, ಅವರ ತಂದೆ ಇತ್ತೀಚೆಗೆ ದಿವಂಗತರಾದರೂ ಇಡೀ ಮನೆಗೆ ಆದರ್ಶ ಕೃಷಿಕ ಯಜಮಾನರಾಗಿದ್ದರು. ಅವರ ತಾಯಿ, ಸಹೋದರರು ಸರಳ ಸಂಸ್ಕೃತಿಗೆ ಹೆಸರು ...ಯಾಗಿದ್ದಾರೆ. ಕಾಗೇರಿ ಕುಟುಂಬ ಇಂದಿನ ಕಾಲಕ್ಕೆ ಆದರ್ಶ ಅವಿಭಕ್ತ ಕುಟುಂಬಕ್ಕೆ ಮಾದರಿಯಾಗಿದೆ.

ಕಾಗೇರಿಯವರು ಪಕ್ಷದ ಎಲ್ಲ ಸ್ತರಗಳಲ್ಲಿ ಪದಾಧಿಕಾರಿಗಳಾಗಿ ಪಕ್ಷದ ಸಂಘಟನೆಗೆ ಅವಿಶ್ರಾಂತವಾಗಿ ದುಡಿದಿದ್ದಾರೆ. ಸದನದ ಒಳಗೆ ಹೊರಗೆ ಅತ್ಯುತ್ತಮ ವಾಗ್ಮಿಗಳಾಗಿ ರಾಜ್ಯದ, ರಾಷ್ಟ್ರದ ನಾಯಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಒಂದೇ ಪಕ್ಷದ ನಿಷ್ಠಾವಂತರಾಗಿ ಶ್ರದ್ಧೆ-ಭಕ್ತಿಯಿಂದ ದುಡಿದ ಕಾರ್ಯಕರ್ತರನ್ನು ಪಕ್ಷ ಗುರುತಿಸುತ್ತಿದೆ ಎಂದು ಹೇಳಲು ಕಾಗೇರಿ ಸಾಕ್ಷಿಯಾಗಿ ನಿಲ್ಲುತ್ತಾರೆ. ವಿಧಾನಸಭೆಯ ಸಭಾಧ್ಯಕ್ಷ ಸ್ಥಾನ ಅತಿ ಎತ್ತರವಾದ ಸ್ಥಾನ, ಎಲ್ಲ ಪಕ್ಷಗಳಿಗೂ ಮಾರ್ಗದರ್ಶಕ ಹಿರಿಯ ಸ್ಥಾನ. ಇಡೀ ರಾಜ್ಯದ ಕಸ್ಟೋಡಿಯನ್ ಇದ್ದ ಹಾಗೆ. ರಾಜ್ಯದ ಇತಿಹಾಸದಲ್ಲಿ ಶ್ರೇಷ್ಠ ಮುತ್ಸದ್ದಿಗಳು ಈ ಸ್ಥಾನ ಅಲಂಕರಿಸಿದ್ದರು.

ಉತ್ತರ ಕನ್ನಡ ಜಿಲ್ಲೆಯಿಂದ ರಾಜ್ಯ, ರಾಷ್ಟ್ರ ರಾಜಕಾರಣದಲ್ಲಿ ಉನ್ನತ ಸ್ಥಾನಕ್ಕೇರಿದ ದಿವಂಗತ ರಾಮಕೃಷ್ಣ ಹೆಗಡೆ ನಂತರ ಉತ್ತರ ಕನ್ನಡ ಜಿಲ್ಲೆಯಿಂದ ಸಾತ್ವಿಕ ವ್ಯಕ್ತಿತ್ವದ ಕಾಗೇರಿ ಎತ್ತರದ ಸ್ಥಾನಕ್ಕೆ ಏರಿದ್ದು ಅಭಿನಂದನೀಯ. ಅವರಿಗೆ ಕರ್ನಾಟಕ ರಾಜಕಾರಣದಲ್ಲಿ ಛಾಪು ಮೂಡಿಸುವ ಈ ಅವಕಾಶದಲ್ಲಿ ಯಶಸ್ವಿಯಾಗಲೆಂದು ಹಾರೈಸುವೆ.